ನವಸಾಕ್ಷರ ಪುಸ್ತಕ ಮಾಲೆ ೪೪

ಜೇನು ಸಾಕಣೆ

ಕಿಶೋರ್‌ಕುಮಾರ್ ಶೇಣಿ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಪಾದಕ ಸಮಿತಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ-೪೪

ಜೇನು ಸಾಕಣೆ

ಕಿಶೋರ್‌ಕುಮಾರ್ ಶೇಣಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೬

JENU SAAKANE : By Kishorkumar Sheny Published by The Director of Prasaranga,
Kannada University, Hampi - 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ ೮.೦೦


ಮುದ್ರಕರು
ಪ್ರಿಂಟ್‌ಪ್ಯಾಕ್
ದೇವಯಾನಿ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್, ೨೮/೨, ಗೌಡನಪಾಳ್ಯ,
ಸುಬ್ರಹ್ಮಣ್ಯಪುರ ರಸ್ತೆ, ಬೆಂಗಳೂರು-೫೬೦ ೦೬೧.

ಜೇನು ಸಾಕಣೆ

ಪ್ರಸ್ತಾವನೆ

ಭೂಮಿಯ ಮೇಲೆ ವಿವಿಧ ಜಾತಿಯ ಕೀಟಗಳನ್ನು ಕಾಣಬಹುದು. ಈ ಕೀಟಗಳಲ್ಲಿ ಮಾನವನಿಗೆ ತೊಂದರೆ ಕೊಡುವಂತಹವೂ ಇವೆ. ಉಪಯೋಗವಾಗುವಂತಹವೂ ಇದೆ. ರೇಷ್ಮೆ ಹುಳು, ಜೇನುನೊಣಗಳು ಮನುಷ್ಯನಿಗೆ ಆರ್ಥಿಕವಾಗಿ ಉಪಯುಕ್ತವೆನಿಸುವ ಕೀಟಗಳು. ನಮ್ಮ ದೇಶದಲ್ಲಿ ಜೇನುಕೃಷಿ ಹಿಂದಿನಿಂದಲೂ ನಡೆಯುತ್ತಿದೆ. ಆದರೆ ಆಧುನಿಕವಾಗಿ ಆರ್ಥಿಕ ಲಾಭಕ್ಕಾಗಿ ಅದನ್ನು ಸಾಕುವ ಕ್ರಮ ಇತ್ತೀಚೆಗಷ್ಟೇ ಪ್ರಾರಂಭವಾಯಿತು. ಜೇನು ಸಾಕುವುದು ಒಂದು ಉದ್ಯೋಗ, ಇದರಿಂದ ಆರ್ಥಿಕವಾಗಿ ಲಾಭಗಳಿಸುವುದು ಸಾಧ್ಯ ಎಂಬ ಅರಿವು ಮೂಡಿತು.

ಇದರ ಪರಿಣಾಮವಾಗಿ ಜೇನು ಸಹಕಾರಿ ಸಂಘಗಳು ಆರಂಭಗೊಂಡವು. ನಿರುದ್ಯೋಗಿಗಳಿಗೆ ಈ ಸಂಘಗಳು ಜೇನು ಸಾಕುವ ಬಗೆಗೆ ತರಬೇತಿ ನೀಡುವುದನ್ನು ಆರಂಭಿಸಿದವು. ಜೇನು ಸಾಕುವ ಪೆಟ್ಟಿಗೆಗಳನ್ನು ತಯಾರಿಸಿ ಅವುಗಳನ್ನು ತರಬೇತಿ ಹೊಂದಿದವರಿಗೆ ರಿಯಾಯಿತಿ ದರಗಳಲ್ಲಿ ಒದಗಿಸತೊಡಗಿದವು. ಜೇನುಸಾಕಿದವರು ತಂದ ಜೇನನ್ನು ಖರೀದಿಸಿ ಸಾರ್ವಜನಿಕರಿಗೆ ಮಾರಾಟಮಾಡುವ ಕೆಲಸವನ್ನು ಸಹ ಈ ಸಂಘಗಳು ವಹಿಸಿಕೊಂಡವು. ಜೇನು ಸಾಕುವುದು ಒಂದು ಕೃಷಿಯಾಗಿ ಬೆಳೆಯುವಲ್ಲಿ ಇದು ಸಹಾಯಕವಾಯಿತು.




ಮರದ ಪೊಟರೆಯಲ್ಲಿ ಜೇನು ಗೂಡು

ಜೇನು ಸಾಕುವುದು ಒಂದು ವಿಜ್ಞಾನ. ಜೇನು ನೊಣಗಳು ಜೀವಿಸುವರೀತಿ, ಅವುಗಳ ದಿನನಿತ್ಯದ ಚಟುವಟಿಕೆಗಳು ಯಾವ ಸಂದರ್ಭದಲ್ಲಿ ಹೇಗಿರುತ್ತವೆ, ಅವುಗಳಿಗೆ ಒದಗಿಸಬೇಕಾದ ಅನುಕೂಲತೆಗಳೇನು ಎಂಬ ಬಗೆಗೆ ವಿವರವಾಗಿ ತಿಳಿದಾಗ ಮಾತ್ರ ಜೇನು ಸಾಕುವುದು ಸುಲಭ. ಲಾಭಗಳಿಸುವುದೂ ಸಾಧ್ಯ.




ಜೇನು ನೊಣ

ಜೇನು ನೊಣಗಳಲ್ಲಿರುವ ಚುಚ್ಚುವ ಮುಳ್ಳುಗಳಿಗೆ ಹೆದರಿ ಜೇನು ಕೃಷಿ ಮಾಡುವುದಕ್ಕೆ ಮನುಷ್ಯ ಹಿಂಜರಿಯುವುದು ಕಂಡುಬರುವ ಸತ್ಯ. ಜೇನು ನೊಣಗಳ ಬಗೆಗೆ ವಿವರವಾಗಿ ತಿಳಿದು ಆಧುನಿಕ ಕ್ರಮದಲ್ಲಿ ಜೇನುಕೃಷಿ ಮೊದಲು ಆರಂಭಿಸಿದರೆ ಇದೇ ಮುಳ್ಳು ವರವಾಗಲೂಬಹುದು.



ಹೂವಿನ ಮೇಲೆ ಕುಳಿತಿರುವ ಜೇನು ನೊಣ



ಜೇನು ಹುಟ್ಟು

ಜೇನುಕೃಷಿ

ಜೇನು ನೊಣಗಳು ಆಹಾರಕ್ಕಾಗಿ ಹೂಗಳಿಂದ ಮಕರಂದವನ್ನು ತಂದು ಉಪಯೋಗಿಸುತ್ತವೆ. ಮಕರಂದ ಎಂದರೆ ಹೂವಿನ ರಸ. ಹೆಚ್ಚು ಹೂವಿನರಸ ದೊರೆತಾಗ ಅವುಗಳನ್ನು ಕೂಡಿಡುತ್ತವೆ. ರಸವನ್ನು ಹಾಗೆಯೇ ಇಟ್ಟಾಗ ಕೆಡುತ್ತದೆ. ಅದಕ್ಕಾಗಿ ಜೇನುನೊಣ ಕೆಲವು ಕ್ರಿಯೆಗಳ ಮೂಲಕ ಹೂವಿನ ರಸವನ್ನು ಜೇನುತುಪ್ಪವನ್ನಾಗಿ ಮಾಡುತ್ತದೆ. ಆಗ ಅದು ಕೆಡದೆ ಉಳಿಯುತ್ತದೆ. ಹೀಗೆ ಸಂಗ್ರಹಿಸಿ ಉಳಿಸಿಕೊಂಡದ್ದನ್ನು ಅಭಾವ ಕಾಲದಲ್ಲಿ ಆಹಾರವಾಗಿ ಬಳಸುತ್ತದೆ.

ಜೇನುನೊಣವು ಹೀಗೆ ಸಂಗ್ರಹಿಸಿದ ಜೇನಿನ ರುಚಿಯನ್ನು ಕಂಡ ಮನುಷ್ಯ ಜೇನುತುಪ್ಪವನ್ನು ಹುಡುಕಿ ಸಂಗ್ರಹಿಸಲು ಪ್ರಾರಂಭಿಸಿದ. ಆ ರೀತಿಯಲ್ಲಿ ಸಿಗುವ ಜೇನು ಸಾಲದಾಯಿತು ಎನ್ನಿಸಿ ಪ್ರಯತ್ನ ಪೂರ್ವಕವಾಗಿ ಜೇನುಗಳನ್ನು ಸಾಕುವುದಕ್ಕೆ ಆರಂಭಿಸಿದ. ಜೇನನ್ನು ಹುಡುಕಿಕೊಂಡು ಹೋಗುವುದನ್ನು ಬಿಟ್ಟು ತನ್ನ ಬುದ್ಧಿಯನ್ನು ಉಪಯೋಗಿಸಿ ಅವುಗಳು ತನ್ನ ಹತ್ತಿರವೇ ಇದ್ದು ತನಗೆ ಜೇನು ತಯಾರಿಸಿ ಕೊಡುವಂತೆ ಮಾಡಿದ. ಯಾಕೆಂದರೆ ಹೂವಿನ ರಸವನ್ನು ಮಾನವನಿಂದ ಸಂಗ್ರಹಿಸಿ ಕುಡಿಯುವುದು ಸಾಧ್ಯವಿಲ್ಲ. ಹೂವಿನ ರಸವನ್ನು ಜೇನುತುಪ್ಪವನ್ನಾಗಿ ಮಾಡಲೂ ಸಾಧ್ಯವಿಲ್ಲ.

ಆದರೆ ಜೇನುನೊಣಗಳು ತನಗಾಗಿ ಈ ಕೆಲಸ ಮಾಡುವಂತೆ ಬಳಸಿದನು. ಜೇನುನೊಣಗಳು ಕೆಲಸಮಾಡಲು ಅನುಗುಣವಾದ ಜೇನುಗೂಡುಗಳನ್ನು ತಯಾರಿಸಿದ. ಆ ನೊಣಗಳು ಬದುಕುವುದಕ್ಕೆ ಬಯಸುವ ಹವಾಗುಣವನ್ನೂ, ಇನ್ನಿತರ ವಸ್ತುಗಳನ್ನೂ ಬುದ್ಧಿಪೂರ್ವಕವಾಗಿ ತಿಳಿದು ಒದಗಿಸಿಕೊಟ್ಟನು. ಆ ರೀತಿಯಲ್ಲಿ ಜೇನುನೊಣಗಳು ತಯಾರಿಸಿದ ಜೇನನ್ನು ತಾನು ಬಳಸುವುದಕ್ಕೆ ಆರಂಭಿಸಿದನು. ಇದನ್ನು "ಜೇನು ಕೃಷಿ" ಎಂದು ಕರೆಯುತ್ತೇವೆ.

"ಜೇನು ಕೃಷಿ"ಯ ಮುಖ್ಯ ಉದ್ದೇಶವೇ ಜೇನು ಸಂಪಾದನೆ. ಅದಕ್ಕಾಗಿ ಜೇನು ನೊಣಗಳು ಹೆಚ್ಚು ಹೆಚ್ಚು ರಸ ಸಂಗ್ರಹಿಸುವಂತೆ ಮಾಡಬೇಕು. ಅವುಗಳಿಗೆ ಬೇಕಾದ ಅನುಕೂಲಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸಿಕೊಡಬೇಕು.

ಆಗ ಜೇನುನೊಣ ಹೆಚ್ಚು ಜೇನು ತಯಾರಿಸಿಕೊಡುತ್ತದೆ. ಇದಕ್ಕಾಗಿ ಜೇನು ನೊಣಗಳ ಬದುಕಿನ ರೀತಿಯನ್ನು ಮಾನವ ತಿಳಿದುಕೊಂಡು ಅದರಂತೆ ಜೇನುಗೂಡನ್ನು

ಮನೆಯಲ್ಲಿಟ್ಟು ಸಾಕತೊಡಗಿದನು. ಇದರಿಂದ ಲಾಭಗಳಿಸಲು ಆರಂಭಿಸಿದನು. ಇತ್ತೀಚಿಗಿನ ದಿನಗಳಲ್ಲಿ ಈ ಕೃಷಿಗೆ ಸರಕಾರದ ಸಹಾಯವೂ ದೊರೆತು ವ್ಯಾಪಕವಾಗಿ ಬೆಳೆಯತೊಡಗಿದೆ.

ಜೇನು ಜಾತಿಗೆ ಸೇರಿದ ನೊಣಗಳು

ಮಾನವ ಜೇನುಕೃಷಿಗಾಗಿ 'ತುಡುವೆ' ಎಂಬ ಜಾತಿಯ ಜೇನನ್ನು ಬಳಸುತ್ತಾನೆ. ಆದರೆ ಜೇನುನೊಣಗಳಲ್ಲಿ ಇನ್ನು ಬೇರೆ ಬೇರೆ ಜಾತಿಯ ನೊಣಗಳಿರುವುದನ್ನು ಕಾಣಬಹುದು. ಎಲ್ಲ ಜಾತಿಯ ನೊಣಗಳನ್ನೂ ಸಾಕುವುದು ಸಾಧ್ಯವಿಲ್ಲ. ಅವುಗಳು ಮಾನವ ಕೃತಕವಾಗಿ ರಚಿಸಿಕೊಡುವ ವ್ಯವಸ್ಥೆಗೆ ಒಗ್ಗಿಕೊಳ್ಳಲಾರವು. 'ತುಡುವೆ' ಮತ್ತು ಉಳಿದ ಜೇನು ಯಾವುವು ಎಂಬುದನ್ನು ನೋಡೋಣ.

ಜೇನು ಜಾತಿಯಲ್ಲಿ ಮುಜಂಟಿ ಜೇನು, ತುಡುವೆ ಜೇನು, ಹೆಜ್ಜೇನು ಮತ್ತು ಕೋಲು ಜೇನು ಎಂಬುದಾಗಿ ನಾಲ್ಕು ವಿಧಗಳನ್ನು ಗುರುತಿಸಬಹುದು. ಪ್ರತಿಯೊಂದು ಜೇನು ಜಾತಿಯೂ ಒಂದರಿಂದ ಇನ್ನೊಂದು ಭಿನ್ನವಾಗಿರುತ್ತದೆ.

ಮುಜಂಟಿ ಜೇನು

ಇವುಗಳು ಸಣ್ಣಗಾತ್ರದ ಜೇನು ನೊಣಗಳು. ಇವು ಎರಿ ಕಟ್ಟಿ ವಾಸಮಾಡುವುದಿಲ್ಲ. ಎರಿ ಎಂದರೆ ಜೇನು ಹುಟ್ಟು. ಇದನ್ನು ಜೇನುಗೂಡು ಎಂದೂ ಕರೆಯುತ್ತಾರೆ. ಮರದ ಪೊಟರೆಗಳಲ್ಲಿ, ಕಟ್ಟಡಗಳ ತಳಭಾಗಗಳಲ್ಲಿ, ಗೋಡೆಗಳಲ್ಲಿನ ಸಂದುಗೊಂದುಗಳಲ್ಲಿ ಮುಜಂಟಿಗಳು ವಾಸಮಾಡುತ್ತವೆ. ಇವುಗಳಲ್ಲಿ ಚುಚ್ಚುವ ಮುಳ್ಳುಗಳಿಲ್ಲ. ಗೂಡನ್ನು ತೆರೆದು ನೋಡಿದಾಗ ನೊಣಗಳು ಗಾಬರಿಯಾಗುತ್ತವೆ. ಮೈಮೇಲೆ, ತಲೆ ಕೂದಲುಗಳ ಮೇಲೆ ಹಾರಿ ಅಂಟಿಕೊಳ್ಳುತ್ತವೆ. ಹೀಗಾಗುವಾಗ ನಮಗೆ ಮುಜುಗರ ಉಂಟಾಗುತ್ತದೆ. ಇದನ್ನು ಬಿಟ್ಟರೆ ಮುಜಂಟಿಗಳಿಂದ ಬೇರೆ ರೀತಿಯ ಅಪಾಯಗಳು ಇರುವುದಿಲ್ಲ.

ಮುಜಂಟಿಜೇನು ದ್ರಾಕ್ಷಿಗೊಂಚಲುಗಳಂತೆ ತನ್ನಗೂಡನ್ನು ರಚಿಸುತ್ತವೆ. ಮಣ್ಣು ಮತ್ತು ಅಂಟಿನಿಂದ ಗೂಡನ್ನು ಮಾಡುತ್ತವೆ. ಗೂಡುಗಳಲ್ಲಿ ಪ್ರತ್ಯೇಕವಾದ ಮೂರು ಪದರಗಳನ್ನು ಕಾಣಬಹುದು. ಅವುಗಳಲ್ಲಿ ಮೇಲಿನಭಾಗದಲ್ಲಿ ಜೇನುತುಪ್ಪ, ಮಧ್ಯಭಾಗದಲ್ಲಿ ಹೂವಿನರಸವನ್ನು ಸಂಗ್ರಹಿಸುತ್ತವೆ. ಕೆಳಗಿನ ಭಾಗದಲ್ಲಿ ಮೊಟ್ಟೆಗಳನ್ನು ಸಾಕುತ್ತವೆ. ಹೀಗೆ ಮುಜಂಟಿಗಳ ಗೂಡು ಹಂತಗಳಲ್ಲಿ ಇರುವುದರಿಂದ ಸುಲಭವಾಗಿ ಜೇನನ್ನು ಪ್ರತ್ಯೇಕ ಮಾಡಲು ಸಾಧ್ಯ.

ಮುಜಂಟಿಗಳು ಅತೀ ಚಿಕ್ಕ ಹೂಗಳಿಂದ ಮತ್ತು ಕೊಳವೆಯಂತಿರುವ ಹೂಗಳಿಂದ ಮಾತ್ರ ರಸವನ್ನು ಸಂಗ್ರಹಿಸುತ್ತವೆ. ಹೀಗೆ ಸಂಗ್ರಹಿಸಿದ ರಸವನ್ನು ಕೆಲವು ಕ್ರಿಯೆಗಳಿಗೆ ಒಳಪಡಿಸಿ ಜೇನುಮಾಡಿ ಸಂಗ್ರಹಿಸುತ್ತವೆ. ಈ ಜೇನುತುಪ್ಪ ಉಳಿದ ಜೇನುತುಪ್ಪಗಳಿಗಿಂತ ಉತ್ತಮವಾಗಿರುತ್ತದೆ. ಔಷಧೀಯ ಗುಣಗಳಿಂದ ಕೂಡಿರುತ್ತದೆ.

ಮುಜಂಟಿ ಜೇನನ್ನು ಬಿದಿರು ಕೊಳವೆಗಳಲ್ಲಿ ಸಾಕಬಹುದು. ಒಮ್ಮೆ ಇದನ್ನು ಕೂರಿಸಿದರೆ ಹಲವು ವರ್ಷಗಳವರೆಗೆ ಇವು ಗೂಡನ್ನು ಬಿಟ್ಟು ಹೋಗುವುದಿಲ್ಲ. ಆದರೆ ಇದರಿಂದ ಹೆಚ್ಚು ಲಾಭಗಳಿಸುವುದು ಸಾಧ್ಯವಿಲ್ಲ.

ತುಡುವೆಜೇನು

ತುಡುವೆಜೇನುಗಳು ಕತ್ತಲು ಪ್ರದೇಶಗಳಲ್ಲಿ ವಾಸಮಾಡುವಂತಹವುಗಳು. ಇವುಗಳು ಹುತ್ತ, ಮರದ ಪೊಟರೆಗಳಲ್ಲಿ ಕಾಣಸಿಗುತ್ತವೆ. ವಾಸಮಾಡುವ ಜಾಗ, ದೊರೆಯುವ ಆಹಾರ ಮತ್ತು ನೊಣಗಳ ಸಂಖ್ಯೆಗಳಿಗೆ ಅನುಗುಣವಾಗಿ ಎರಿಗಳನ್ನು ತಯಾರಿಸುತ್ತವೆ. ತುಡುವೆ ಜೇನು ಹತ್ತರಿಂದ ಹನ್ನೆರಡು ಎರಿಗಳನ್ನು ರಚಿಸುತ್ತವೆ. ತುಡುವೆಗಳು ವಲಸೆಹೋಗುವುದು ಕಡಿಮೆ. ಚುಚ್ಚುವುದು ಕಡಿಮೆ. ಇವುಗಳಲ್ಲಿ ಎರಡು ಜಾತಿಯ ನೊಣಗಳನ್ನು ಗುರುತಿಸಬಹುದು.

೧. ಬೆಟ್ಟ ಪ್ರದೇಶದ ತುಡುವೆ ನೊಣಗಳು

ಮತ್ತು

೨. ಬಯಲು ಪ್ರದೇಶದ ತುಡುವೆ ನೊಣಗಳು.

ಇವೆರಡರ ಬಣ್ಣಗಳಲ್ಲಿ ವ್ಯತ್ಯಾಸವಿರುತ್ತದೆ.

ಬೆಟ್ಟ ಪ್ರದೇಶ ನೊಣಗಳು ಸುಮಾರು ಐವತ್ತು ಕಣಗಳನ್ನುರಚಿಸುತ್ತವೆ. ಜೇನು ನೊಣಗಳು ಜೇನು ಸಂಗ್ರಹಿಸಲು, ಮೊಟ್ಟೆಗಳನ್ನು ಇಡುವುದಕ್ಕೆ ಪ್ರತ್ಯೇಕ ಕೋಣೆಗಳಂತೆ ಕಾಣುವ ಈ ಕೋಣೆಗಳನ್ನು ಮಾಡುತ್ತವೆ. ಕಣ, ಕೋಶ, ಗೂಡುಗಳೆಂಬ ಹೆಸರುಗಳಿಂದಲೂ ಕರೆಯುತ್ತಾರೆ. ಬಯಲುಪ್ರದೇಶದ ನೊಣಗಳಿಗಿಂತ ಇವು ದೊಡ್ಡವು. ಇವು ಚುಚ್ಚುವುದು ಕಡಿಮೆ. ಬಯಲು ಪ್ರದೇಶದ ನೊಣಗಳಿಗಿಂತ ಹೆಚ್ಚು ಚಟುವಟಿಕೆಯಿಂದ ಕೂಡಿರುತ್ತವೆ. ಆದರೆ ಇವುಗಳಿಗೆ ಕಾಯಿಲೆಗಳು ಬರುವುದು ಹೆಚ್ಚು.

ಬಯಲು ಪ್ರದೇಶದ ನೊಣಗಳು ಎರಿಯನ್ನು ಒಂದು ಇಂಚು ಚೌಕದಲ್ಲಿ ರಚಿಸುವವು. ಎರಿಯ ಎರಡು ಬದಿಗಳಲ್ಲೂ ಸುಮಾರು ಎಪ್ಪತ್ತು ಕಣಗಳನ್ನು ರಚಿಸುವುವು. ಬೆಟ್ಟ ಪ್ರದೇಶದ ನೊಣಗಳಷ್ಟು ಉತ್ತಮ ಚಟುವಟಿಕೆ ಇವುಗಳಲ್ಲಿ ಇಲ್ಲ. ಬೆಟ್ಟಪ್ರದೇಶದ ನೊಣಗಳಿಗಿಂತ ಇವು ಚಿಕ್ಕದಾಗಿರುತ್ತವೆ.

ಈ ಜಾತಿಯ ನೊಣಗಳನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ತಂದು ಸಾಕುವುದು ಸಾಧ್ಯವಿಲ್ಲ.

ತುಡುವೆ ಜೇನುನೊಣಗಳು ಕತ್ತಲು ಪ್ರದೇಶದಲ್ಲಿ ವಾಸಮಾಡುವುದರಿಂದಾಗಿ ಪೆಟ್ಟಿಗೆಯಲ್ಲಿ ಸಾಕುವುದು ಸಾಧ್ಯ. ಹೆಚ್ಚು ಲಾಭಗಳಿಸುವುದೂ ಸಾಧ್ಯ.

ಹೆಜ್ಜೇನು

ಇವುಗಳು ತುಡುವೆಗಳಿಗಿಂತ ದೊಡ್ಡದಾಗಿರುತ್ತವೆ. ಇವುಗಳಿಗೆ ಗಾಳಿ, ಬೆಳಕು ಹೆಚ್ಚು ಬೇಕಾಗುತ್ತದೆ. ಇದರಿಂದಾಗಿ ಇವು ಎತ್ತರವಾದ ಮರಗಳಲ್ಲಿ, ಗೋಪುರಗಳ ಬದಿಗಳಲ್ಲಿ ದೊಡ್ಡದೊಡ್ಡ ಕಲ್ಲುಬಂಡೆಯ ಅಡಿಯಲ್ಲಿ ಮತ್ತು ಬದಿಗಳಲ್ಲಿ ವಾಸವಾಗಿರುವುದನ್ನು ಕಾಣಬಹುದು. ಹೆಜ್ಜೇನುಗಳು ಒಂದೇ ಎರಿಯಲ್ಲಿ ವಾಸಿಸುತ್ತವೆ. ಇವುಗಳ ಎರಿಗಳು ದೊಡ್ಡದಾಗಿರುತ್ತವೆ.

ಇಂತಹ ಒಂದು ಕುಟುಂಬದಿಂದ ಇಪ್ಪತ್ತರಿಂದ ಇಪ್ಪತ್ತೈದು ಕಿಲೋಗಳಿಗಿಂತಲೂ ಹೆಚ್ಚು ಜೇನುತುಪ್ಪ ಪಡೆಯಬಹುದು. ಇದರ ಜೇನುತುಪ್ಪ ತೆಳ್ಳಗಿರುತ್ತದೆ. ಪರಾಗಗಳು ಹೆಚ್ಚು

ಇರುವುದರಿಂದಾಗಿ ಹೆಚ್ಚು ಕಾಲ ಸಂಗ್ರಹ ಮಾಡಿ ಇಡುವುದು ಸಾಧ್ಯವಿಲ್ಲ. ಜೇನುಪರಾಗವನ್ನು ಸಂಗ್ರಹಿಸುವುದಿಲ್ಲ. ಹೂವಿನರಸವನ್ನು ಸಂಗ್ರಹಿಸುವಾಗ ಪರಾಗಗಳು ಅಂಟಿಕೊಂಡು ಬಿಡುತ್ತದೆ. ಇದರಿಂದ ಜೇನು ಬೇಗ ಕೆಡುತ್ತದೆ.

ಹೆಜ್ಜೇನುಗಳು ಚುಚ್ಚುವುದು ಹೆಚ್ಚು. ವೈರಿಗಳೆಂದು ತಿಳಿದರೆ ಸಾಕು ಬಂದು ಚುಚ್ಚುವುವು. ಪ್ರಾಣಿ, ಮನಷ್ಯರೆಂಬ ಭೇದವಿಲ್ಲದೆ ಬಂದು ಚುಚ್ಚುವುದಕ್ಕೆ ಪ್ರಾರಂಭಿಸುವುವು. ಒಂದು ನೊಣ ಬಂದು ಚುಚ್ಚಿದರೆ ಸಾಕು ಅದರ ವಾಸನೆಯಿಂದಲೇ ಮತ್ತೂ ಹೆಚ್ಚು ನೊಣಗಳು ಬಂದು ಚುಚ್ಚುವುವು. ಹೆಚ್ಚು ನೊಣಗಳು ಒಟ್ಟಿಗೆ ಚುಚ್ಚಿದರೆ ಪ್ರಾಣಕ್ಕೂ ಅಪಾಯವಾಗುವ ಸಾಧ್ಯತೆಗಳು ಇವೆ.

ಇವುಗಳಲ್ಲಿರುವ ಈ ಚುಚ್ಚುವ ಗುಣದಿಂದಾಗಿ ಇದನ್ನು ಮಾನವ ಸಾಕುವ ಸಾಹಸಕ್ಕೆ ಹೋಗುವುದಿಲ್ಲ. ಹೆಜ್ಜೇನುಗಳನ್ನು ಗೂಡಿನಲ್ಲಿಟ್ಟು ಸಾಕುವುದು ಕಷ್ಟವೂ ಹೌದು. ಏಕೆಂದರೆ ಅವು ಆಹಾರ, ವಾಸದ ಸ್ಥಳಗಳಿಗೆ ಅನುಗುಣವಾಗಿ ವಲಸೆಹೋಗುತ್ತಿರುತ್ತವೆ. ಆದರೂ ಸಾಕುವ ಪ್ರಯತ್ನಗಳು ನಡೆಯುತ್ತಿವೆ. ಅವುಗಳು ಬಯಸುವ ವ್ಯವಸ್ಥೆಯನ್ನು ಕೃತಕವಾಗಿ ನಿರ್ಮಿಸಿ ಸಾಕುವುದು ಸಾಧ್ಯವೇ ಎಂಬುದು ಪ್ರಶ್ನೆ. ಈ ಜೇನು ಅಗಾಧ ಪ್ರಮಾಣದಲ್ಲಿ ತಯಾರಾಗುತ್ತದೆ ಎಂಬುದು ಈ ಪ್ರಯತ್ನದ ಹಿನ್ನೆಲೆಗೆ ಇರುವ ಆಕರ್ಷಣೆ. ಮಾನವ ಮಾಡಿದ ಪ್ರಯತ್ನದಲ್ಲಿ ಸ್ವಲ್ಪ ಮಟ್ಟಿಗೆ ಪ್ರಯೋಜನ ದೊರೆತಿರುವುದು ಗಮನಿಸತಕ್ಕ ಅಂಶ.

ಕೋಲು ಜೇನು


ಇವು ತುಡುವೆನೊಣಗಳಿಗಿಂತ ಚಿಕ್ಕವು. ಇವುಗಳೂ ಸಹ ಹೆಜ್ಜೇನಿನಂತೆ ಒಂದೇ ಎರಿಯಲ್ಲಿ ವಾಸಮಾಡುತ್ತವೆ. ಕೋಲುಜೇನುಗಳು ವಲಸೆಹೋಗುವುದು ಹೆಚ್ಚು. ಇವುಗಳು ಪೊದರುಗಳಲ್ಲಿ, ಗಿಡದ ಗೆಲ್ಲುಗಳಲ್ಲಿ, ಮರದ ಗೆಲ್ಲುಗಳಲ್ಲಿ ಎರಿಕಟ್ಟಿ ವಾಸಮಾಡುತ್ತವೆ. ಕೋಲುಜೇನುಗಳು ಚುಚ್ಚುವುದು ಕಡಿಮೆ.

ಇವುಗಳ ಒಂದು ಕುಟುಂಬದಿಂದ ಒಂದರಿಂದ ಒಂದೂವರೆ ಕಿಲೋ ಜೇನು ಪಡೆಯಲು ಸಾಧ್ಯವಿದೆ. ಇವುಗಳ ಜೇನುತುಪ್ಪ ಉತ್ತಮವಾಗಿರುತ್ತದೆ. ಇವುಗಳು ಪರಾಗ, ಸ್ಪರ್ಶಕ್ರಿಯೆಯಲ್ಲಿ ತುಂಬಾ ನೆರವಾಗುತ್ತವೆ.

ಹೆಜ್ಜೇನುಗಳಂತೆ ಇವು ಸಹ ಗಾಳಿ, ಬೆಳಕನ್ನು ಹೆಚ್ಚು ಬಯಸುತ್ತವೆ. ಇದಕ್ಕಾಗಿ ವಲಸೆ ಹೋಗುತ್ತಿರುತ್ತವೆ. ಈ ಕಾರಣದಿಂದಾಗಿ ಇವುಗಳನ್ನು ಪೆಟ್ಟಿಗೆಗಳಲ್ಲಿ ಇಟ್ಟು ಸಾಕುವುದು ತೀರಾ ಕಷ್ಟ.

ಜೇನುನೊಣಗಳ ಕುಟುಂಬ ವ್ಯವಸ್ಥೆ

ಜೇನು ಕುಟುಂಬವೊಂದರಲ್ಲಿ ಮೂರು ರೀತೀಯ ನೊಣಗಳನ್ನು ಕಾಣಬಹುದು. ಒಂದು ಕುಟುಂಬಕ್ಕೆ ಒಂದು ರಾಣಿ ಜೇನು ಇರುತ್ತದೆ. ಉಳಿದ ನೊಣಗಳಲ್ಲಿ ಕೆಲವು ಗಂಡಾಗಿರುತ್ತವೆ. ಬಹು ಸಂಖ್ಯೆಯವು ಕೆಲಸಗಾರ ನೊಣಗಳಾಗಿರುತ್ತವೆ. ಈ ಮೂರು ರೀತಿಯ ನೊಣಗಳು ಸೇರಿ ಒಂದು ಕುಟುಂಬ ಆಗಿರುತ್ತದೆ. ಇವುಗಳು ಒಂದು ವ್ಯವಸ್ಥಿತ ರೀತಿಯಲ್ಲಿ ಕೆಲಸಮಾಡುತ್ತಿರುತ್ತವೆ.



ರಾಣಿಜೇನು:

ದಿನಕ್ಕೆ ಸಾವಿರಾರು ಮೊಟ್ಟೆಗಳನ್ನಿಟ್ಟುಕೊಂಡು ಗೂಡಿನಲ್ಲಿ ಸುಖವಾಗಿರುವ ಜೇನು ಇದು. ರಾಣಿ ಇಟ್ಟ ಮೊಟ್ಟೆಗಳನ್ನು ಕೆಲಸಗಾರ ನೊಣಗಳು ಕೋಶಗಳಿಗೆ ಒಯ್ದು ಪೋಷಿಸುತ್ತವೆ. ಯಾವುದೇ ಕಾರಣಗಳಿಂದ ರಾಣಿಜೇನು ಸತ್ತು ಹೋದಾಗ ಅಥವಾ ಗೂಡಿನಲ್ಲಿ ಇಲ್ಲವಾದರೆ ಹೊಸರಾಣಿಯ ಅವಶ್ಯಕತೆ ಬೀಳುತ್ತದೆ. ಹಾಗೆ ಬೇರೆ ರಾಣಿಯು ಅವಶ್ಯ ಎಂದು ಕೆಲಸಗಾರ ನೊಣಗಳಿಗೆ ತಿಳಿದಾಗ, ಸಾಮಾನ್ಯವಾಗಿ ಜೇನುನೊಣಗಳು ಎರಿಯ ಕೋಶಗಳಲ್ಲಿ ಸಂಗ್ರಹಿಸಿರುವ ಮೊಟ್ಟೆಗಳ ಪೈಕಿ ಒಂದು ಹೆಣ್ಣು ಮೊಟ್ಟೆಯನ್ನು ಆಯ್ದು ಪ್ರತ್ಯೇಕ ಕೋಶದಲ್ಲಿ ಇಡುತ್ತವೆ. ಈ ಒಂದು ಹೆಣ್ಣು ಮೊಟ್ಟೆಯನ್ನು ಎಲ್ಲ ನೊಣಗಳು ಸೇರಿ ವಿಶೇಷ ಜಾಗರೂಕತೆಯಿಂದ ಸಾಕುತ್ತವೆ. ಇದಕ್ಕಾಗಿ ವಿಶೇಷ ರಸದ ಆಹಾರವನ್ನು ಒದಗಿಸುತ್ತವೆ. ಈ ರಸವನ್ನು 'ರಾಜರಸ' ಎಂದು ಹೇಳುತ್ತಾರೆ. ಹೀಗೆ ವಿಶೇಷವಾಗಿ ಬೆಳೆದ ನೊಣ ದಷ್ಟಪುಷ್ಟವಾಗಿ ಪ್ರಾಯಕ್ಕೆ ಬರುತ್ತದೆ.

ಪ್ರಾಯಕ್ಕೆ ಬಂದ ಈ ಹೆಣ್ಣುನೊಣ ಗಂಡುನೊಣಗಳ ಪೈಕಿ ಒಂದನ್ನು ಕೂಡುತ್ತದೆ. ಗರ್ಭಧರಿಸುತ್ತದೆ. ಮೊಟ್ಟೆಗಳನ್ನಿಡಲು ಆರಂಭಿಸುತ್ತದೆ. ಒಂದು ದಿನದಲ್ಲಿ ಐನೂರರಿಂದ ಸಾವಿರದ್ಶೆನೂರು ಮೊಟ್ಟೆಗಳನ್ನು ಇಟ್ಟು ಕುಟುಂಬವು ಬೆಳೆಯಲು ಕಾರಣವಾಗುತ್ತದೆ. ರಾಣಿಯ ಮುಖ್ಯ ಕೆಲಸ ಸಂತಾನ ಅಭಿವೃದ್ಧಿಯೇ ಆಗಿದೆ. ಆದರೆ ಇಡೀ ಕುಟುಂಬದ ಕೆಲಸ ಕಾರ್ಯಗಳು ಸುಗಮವಾಗಿ ನೆರವೇರಲು ತಕ್ಕ ಶಿಸ್ತನ್ನು ಕಾಪಾಡುವುದು ಸಹ ಈ ರಾಣಿಯ ಜವಾಬ್ದಾರಿಯೇ ಆಗಿರುತ್ತದೆ.

ರಾಣಿಯು ತಲೆಯಿಂದ ಒಂದು ರೀತಿಯ ದ್ರವ ಸ್ರವಿಸುತ್ತಿರುತ್ತದೆ. ಈ ದ್ರವ ಎಲ್ಲ ಹುಳುಗಳನ್ನೂ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗುವಂತೆ ಹತೋಟಿ ಮಾಡುತ್ತದೆ. ಇಡೀ ಜೇನುಗೂಡಿನ ವ್ಯವಸ್ಥೆ ರಾಣಿಯ ಶಕ್ತಿಯನ್ನೇ ಅನುಸರಿಸುತ್ತದೆ. ರಾಣಿ ದೌರ್ಬಲ್ಯ ತೋರಿದರೆ ಇಡೀ ಕುಟುಂಬದಲ್ಲಿ ಏರುಪೇರುಗಳಾಗುತ್ತವೆ. ರಾಣಿಯು ಮೂರರಿಂದ ನಾಲ್ಕು ವರ್ಷಗಳ ವರೆಗೆ ಬದುಕಿರುತ್ತದೆ.

ಜೇನುಕೃಷಿಯಲ್ಲಿ ಗೂಡಿನ ರಾಣಿಯನ್ನು ಪ್ರತಿವರ್ಷ ಬದಲಾಯಿಸುವುದು ಒಂದು ಮುಖ್ಯ ಕೆಲಸ. ಹಳೆಯ ರಾಣಿಗೆ ಮೊಟ್ಟೆ ಇಡುವ ಶಕ್ತಿ ಕಡಿಮೆಯಾಗುವುದು. ಆಗ ಕುಟುಂಬ

ಬೆಳೆಯಲಾರದು. ರಾಣಿಯನ್ನು ಬದಲಾಯಿಸಿದಾಗ ಕುಟುಂಬ ಬೆಳೆಯುತ್ತದೆ. ಹೆಚ್ಚು ಜೇನು ಕೂಡ ದೊರೆಯುತ್ತದೆ.

ಗಂಡುನೊಣ

ಹಳೆಯ ರಾಣಿಯು ಇಟ್ಟ ಮೊಟ್ಟೆಗಳಲ್ಲಿ ಕೆಲವು ಗಂಡು ನೊಣಗಳಾಗುತ್ತವೆ. ಹೊಸ ರಾಣಿಯೊಂದಿಗೆ ಕೂಡಿ ರಾಣಿಯ ಗರ್ಭಧಾರಣೆಗೆ ಕಾರಣವಾಗುತ್ತವೆ. ಇದೊಂದು ಕೆಲಸವನ್ನು ಬಿಟ್ಟು ಗಂಡುನೊಣಕ್ಕೆ ಬೇರೇನೂ ಕೆಲಸವಿಲ್ಲ. ಉಳಿದಂತೆ ಕೆಲಸಗಾರ ಜೇನುಗಳು ತಂದು ಕೂಡಿಸಿದ ಆಹಾರವನ್ನು ಸೇವಿಸುತ್ತಾ ಸೋಮಾರಿಗಳಾಗಿ ಕಾಲಕಳೆಯುತ್ತವೆ. ಗೂಡಿನಲ್ಲಿ ಆಹಾರ ಸಮೃದ್ಧಿಯಾಗಿ ಇರುವಾಗ ಹೀಗೆ ನಡೆಯುತ್ತಿರುತ್ತದೆ. ಆದರೆ ಗೂಡಿನಲ್ಲಿ ಆಹಾರದ ಕೊರತೆ ಬಿದ್ದಾಗ ಕೆಲಸಗಾರಜೇನುಗಳು ಗಂಡುಜೇನುಗಳನ್ನು ನಿರ್ದಾಕ್ಷಿಣ್ಯವಾಗಿ ಕೊಂದು ಆಚೆ ಹಾಕುತ್ತವೆ.

ಗಂಡು ನೊಣಗಳ ಪ್ರಾಯ ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ. ಇದರ ಬಣ್ಣ ಕಪ್ಪಾಗಿರುತ್ತದೆ. ಇವುಗಳಿಗೆ ವಾಸನೆ ಇಲ್ಲ. ಯಾವ ಗೂಡಿನಲ್ಲಿಯೂ ಬದುಕುವುದು ಇದಕ್ಕೆ ಸಾಧ್ಯ.

ಕೆಲಸಗಾರ ಜೇನು ನೊಣಗಳು

ಒಂದು ಜೇನುಗೂಡಿನಲ್ಲಿ ಕೆಲಸಗಾರಜೇನುಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಹೂವಿನ ರಸವನ್ನು ಸಂಗ್ರಹಿಸುವುದು, ಗೂಡಿನ ಕೋಶಗಳನ್ನು ರಚಿಸುವುದು, ಹೂವಿನ ರಸವನ್ನು ಜೇನಾಗಿ ಪರಿವರ್ತಿಸಿ ಕೂಡಿಡುವುದು, ಕೋಶಗಳನ್ನು ಚೊಕ್ಕಟವಾಗಿಡುವುದು, ಗೂಡಿನ ರಕ್ಷಣೆಮಾಡುವುದು, ರಾಣಿಯನ್ನು ಸಾಕುವುದು- ಹೀಗೆ ಪ್ರತಿಯೊಂದು ಕೆಲಸವನ್ನು ಹಂಚಿಕೊಂಡು ವ್ಯವಸ್ಥಿತವಾಗಿ ಮಾಡುತ್ತಿರುತ್ತವೆ. ಈ ಕೆಲಸಗಾರ ನೊಣಗಳು ಕೆಲಸ ಮಾಡುವ ವಿಧಾನವನ್ನು

ಗಮನಿಸಿದಾಗ ಆಶ್ಚರ್ಯದ ಸಂಗತಿಗಳು ಕಂಡು ಬರುತ್ತವೆ. ಅವುಗಳು ತಮ್ಮ ಚಲನೆಯ ಲಯದಿಂದ ಪರಸ್ಪರ ಸಂವಹನ ಮಾಡಿಕೊಳ್ಳುತ್ತವೆ ಎಂದರೆ ನಂಬಬಲ್ಲಿರಾ? ನೃತ್ಯದಂತೆ ಮೋಹಕವಾಗಿ ಕಾಣುವ ಚಲನೆಗಳು ಅರ್ಥಪೂರ್ಣವಾಗಿರುತ್ತದೆ.

ಇವುಗಳಲ್ಲಿ ವಿಷಪೂರಿತ ಚುಚ್ಚುವ ಮುಳ್ಳುಗಳಿರುತ್ತವೆ. ಶತ್ರುಗಳಿಗೆ ಚುಚ್ಚಿದ ನೊಣವು ಸ್ವಲ್ಪ ಸಮಯದಲ್ಲಿಯೇ ಸಾಯುವುದು. ಇವುಗಳ ಆಯಸ್ಸು ಮೂರು ತಿಂಗಳಿಂದ ಆರುತಿಂಗಳು ಮಾತ್ರ. ರಾಣಿ ಇಡುವ ಮೊಟ್ಟೆಗಳಿಂದ ಸರಾಸರಿ ಮೂರು ದಿನಗಳಿಗೊಮ್ಮೆ ಹೊಸ ನೊಣಗಳು ಹೊರ ಬರುತ್ತಿರುತ್ತವೆ. ಇವು ಸತ್ತು ಹೋದ ಕೆಲಸಗಾರನೊಣಗಳ ಜಾಗವನ್ನು ತುಂಬುತ್ತಿರುತ್ತವೆ.

ಜೇನು ತರಬೇತಿ

ಈಗ ಜೇನು ಸಹಕಾರಿ ಸಂಘಗಳು ಅಲ್ಲಲ್ಲಿ ಸ್ಥಾಪನೆಗೊಂಡಿವೆ. ಜೇನು ಕೃಷಿ ಮಾಡುವ ಬಯಕೆ ಹೊಂದಿರುವವರಿಗೆ ಇವು ತರಬೇತಿಗಳನ್ನು ನೀಡುತ್ತವೆ. ಕಡಿಮೆ ದರದಲ್ಲಿ ಈ ಸಂಘಗಳು ಪೆಟ್ಟಿಗೆಗಳನ್ನು ಸದಸ್ಯರಿಗೆ ಒದಗಿಸುತ್ತವೆ.

ಜೇನುಕೃಷಿಕರು ಸಂಗ್ರಹಿಸಿದ ಜೇನನ್ನು ಇವು ಕೊಂಡುಕೊಳ್ಳುತ್ತವೆ. ಉಳಿದ ವ್ಯಾಪಾರಿಗಳ ಕೈಯಲ್ಲಿ ಜೇನುಕೃಷಿಕರು ಮೋಸ ಹೋಗುವುದನ್ನು ತಡೆದು ಸರಿಯಾದ ಬೆಲೆಯನ್ನು ಕೃಷಿಕನಿಗೆ ಕೊಡುತ್ತವೆ. ಸಹಕಾರಿ ಸಂಘಗಳಲ್ಲಿ ತರಬೇತಿ ಪಡೆದವರಿಗೆ ಬ್ಯಾಂಕುಗಳು ಜೇನುಕೃಷಿಗೆ ಬೇಕಾದ ಸಾಲ ಕೊಡುತ್ತವೆ. ಹೀಗೆ ಜೇನುಕೃಷಿಕನಿಗೆ ಒದಗುವ ಸಹಾಯಗಳು ಹಲವಾರು.

ಪೆಟ್ಟಿಗೆ ತಯಾರಿ

ಜೇನುಕೃಷಿಯನ್ನು ಮಾಡುವಂತಹ ವ್ಯಕ್ತಿಗೆ ಜೇನು ಕೂರುವ ಪೆಟ್ಟಿಗೆ ತಯಾರಿಯ ಬಗೆಗೂ ತಿಳಿದಿರುವುದು ಅವಶ್ಯವಾಗಿದೆ.

ಜೇನನ್ನು ಹಿಂದಿನಕಾಲದಲ್ಲಿ ಮಡಿಕೆಯಲ್ಲಿ ಸಾಕುತ್ತಿದ್ದರು. ಬಿದಿರುಗಳಲ್ಲಿ, ಈಚಲಿನ ಮರದ ಎರಡು ಬದಿಗಳನ್ನು ಮುಚ್ಚಿ ಅದರಲ್ಲಿ ಸಹ ಸಾಕುತ್ತಿದ್ದರು. ಇದು

ಪೆಟ್ಟಿಗೆಗಳಷ್ಟು ಅನುಕೂಲವಲ್ಲ. ಇದನ್ನು ತೆರೆದು ಪರೀಕ್ಷೆ ಮಾಡುವುದು ಕಷ್ಟದ ಕೆಲಸ. ಪೆಟ್ಟಿಗೆಗಳು ಎಲ್ಲ ದೃಷ್ಟಿಯಿಂದ ಅನುಕೂಲವಾದದ್ದು.

ಜೇನುಗಳು ಪ್ರಾಕೃತಿಕವಾಗಿ ಜೀವಿಸುವಂತಹ ಜೀವಿಗಳು. ಇವುಗಳು, ಯಾವ ರೀತಿಯಲ್ಲಿ ಕೃತಕ ಪೆಟ್ಟಿಗೆಯಲ್ಲಿ ಜೀವಿಸಬಹುದು ಎಂಬ ಬಗೆಗೆ ಜೇನುಕೃಷಿಕ ತಿಳಿದಿರಬೇಕು. ಪೆಟ್ಟಿಗೆಗೆಳನ್ನು ಹೆಚ್ಚು ಬಾಳಿಕೆ ಬರುವ ದೃಷ್ಟಿಯಿಂದ ಉತ್ತಮ ಮರಗಳಿಂದಲೇ ತಯಾರಿಸಬೇಕು. ಜೇನುಗಳು ನಿರ್ಮಲವಾದ, ಅಡ್ಡವಾಸನೆಗಳಿಲ್ಲದ ವಾಸಸ್ಥಳವನ್ನು ಬಯಸುತ್ತವೆ. ಪೆಟ್ಟಿಗೆಗೆ ಬಳಸಿದ ಮರಕ್ಕೆ ಕೆಟ್ಟ ವಾಸನೆ ಇರಬಾರದು. ಸಾಗುವಾನಿ, ಹಲಸು ಮುಂತಾದ ಮರಗಳಲ್ಲಿ ಜೇನು ಪೆಟ್ಟಿಗೆಗಳನ್ನು ತಯಾರಿಸಬೇಕು.

ಒಂದು ಕುಟುಂಬ ಎಷ್ಟು ಎರಿಗಳನ್ನು ಕಟ್ಟುವ ಸಾಮರ್ಥ್ಯ ಹೊಂದಿದೆ ಎಂಬುದರ ಆಧಾರದ ಮೇಲೆ ಚೌಕಟ್ಟನ್ನು ತಯಾರಿಸಬೇಕು ಚೌಕಟ್ಟುಗಳು ಪೆಟ್ಟಿಗೆಗೆ ಲಂಬವಾಗಿರಬೇಕು. ಜೇನುನೊಣಗಳಿಗೆ ಎರಿಯ ಮಧ್ಯಭಾಗದಲ್ಲಿ ಸಂಚರಿಸುವುದಕ್ಕೆ ಬೇಕಾದಷ್ಟು ಜಾಗ ಇಟ್ಟಿರಬೇಕು. ಜಾಗ ಕಡಿಮೆ ಆದಾಗ ಇವುಗಳು ಮಾಡುವ ಕೆಲಸ ಕಡಿಮೆಯಾಗುತ್ತದೆ. ತೀರಾ ದೊಡ್ಡದಾಗಿದ್ದಾಗಲೂ ಸಮಸ್ಯೆ ಇದೆ. ಎರಿಗಳ ಮಧ್ಯೆ ಜೇನುನೊಣಗಳು ಮತ್ತೊಂದು ಎರಿಯನ್ನು ಕಟ್ಟುತ್ತವೆ. ಆಗ ಜೇನು ತೆಗೆಯುವುದಕ್ಕೆ ಕಷ್ಟವಾಗುವುದು. ಇದೆಲ್ಲವನ್ನೂ ತಿಳಿದು ಜೇನುಕೃಷಿಕ ಪೆಟ್ಟಿಯನ್ನು ತಯಾರಿಸಬೇಕು.

ಜೇನುನೊಣಗಳು ಆಹಾರ ಸಂಗ್ರಹಿಸುವುದಕ್ಕಾಗಿ ಎರಡು ಮೈಲುದೂರದವರೆಗೂ ಹಾರುತ್ತದೆ. ಹೀಗೆ ಹಾರಿದ ನೊಣಗಳು ಮರಳಿ ಬಂದು ತಮ್ಮ ಗೂಡನ್ನು ಹೇಗೆ ಪತ್ತೆ ಹಚ್ಚುತ್ತವೆ ಎಂಬುದು ಆಶ್ಚರ್ಯದ ವಿಷಯವಲ್ಲವೆ? ಜೇನುನೊಣಗಳು ವಾಸನೆಯಿಂದ ತಮ್ಮ ಗೂಡುಗಳನ್ನು ಪತ್ತೆ ಹಚ್ಚುತ್ತವೆ.

ಒಂದು ವೇಳೆ ಒಂದು ಜೇನುನೊಣ ತನ್ನದಲ್ಲದ ಗೂಡಿಗೆ ತಪ್ಪಿ ಹೋದಾಗ ಅಲ್ಲಿನ ನೊಣಗಳು ಸೇರಿ ಇದನ್ನು ಕೊಂದು ಹಾಕುತ್ತವೆ. ಇದಕ್ಕೆ ಜೇನಿನ ಮೈ ಮೇಲಿರುವ ವಾಸನೆಯೇ ಕಾರಣವಾಗಿದೆ.


ಜೇನನ್ನು ಪೆಟ್ಟಿಗೆಯಲ್ಲಿ ಕೂರಿಸುವುದು

ಜೇನನ್ನು ಪೆಟ್ಟಿಗೆಯಲ್ಲಿ ಕೂರಿಸುವುದಕ್ಕೂ ಒಂದು ಸಮಯ ಇದೆ. ನವಂಬರ್ ತಿಂಗಳಿನಿಂದ ಮಾರ್ಚ್ ತಿಂಗಳ ವರೆಗೆ ಪೆಟ್ಟಿಗೆಯಲ್ಲಿ ಜೇನು ಕೂರಿಸಲು ಉತ್ತಮ ಕಾಲ. ಉಳಿದ ಸಮಯದಲ್ಲಿ ಕೂರಿಸಬಾರದೆಂದೇನೂ ಇಲ್ಲ. ಹೂಗಳು ಅರಳದ ಕಾಲದಲ್ಲಿ ಕೂರಿಸಿದರೆ ಆಹಾರವನ್ನು ಕೃತಕವಾಗಿ ನಾವೇ ನೀಡಬೇಕಾಗುತ್ತದೆ. ಕೃತಕ ಎರಿಗಳನ್ನು ನಾವು ಕೊಡಬೇಕಾಗುವುದು. ಹಾಗಾಗಿ ಹೆಚ್ಚು ಹೂಗಳು ಅರಳುವ ಕಾಲವಾದ ನವೆಂಬರ್ ನಿಂದ ಮಾರ್ಚ್ ತಿಂಗಳೇ ಉತ್ತಮವಾಗಿರುತ್ತದೆ.

ಹುತ್ತಗಳಲ್ಲಿ, ಮರದ ಪೊಟರೆಗಳಲ್ಲಿ, ಕಲ್ಲು ಬಂಡೆಗಳ ಸೆರೆಗಳಲ್ಲಿ ಕುಳಿತ ತುಡುವೆ ಜೇನುಗಳನ್ನು ತಂದು ಗೂಡಿಗೆ ಸೇರಿಸಬಹುದು. ಇವುಗಳನ್ನು ಬಟ್ಟೆ ಉಪಯೋಗಿಸಿ ತರಬೇಕಾಗುತ್ತದೆ. ಅಥವಾ ಹೆವಿಂಗ್ ಕೇಜನ್ನು ಬಳಸಬಹುದು. ಹೆವಿಂಗ್ ಕೇಜ್ ಎನ್ನುವುದು ಜೇನುಗಳನ್ನು ತರುವ ಒಂದು ಪಂಜರದಂತಹ ಸಾಧನ. ಇದನ್ನು ಬೇಕಾದರೂ ಉಪಯೋಗಿಸಿ ಜೇನು ಒಕ್ಕಲನ್ನು ಪೆಟ್ಟಿಗೆಯಲ್ಲಿ ಕೂಡಬಹುದು.

ಹೀಗೆ ಕೂರಿಸುವಾಗ ರಾಣಿನೊಣ ಬಂದಿದೆಯೇ ಎಂಬುದನ್ನು ಗಮನಿಸಬೇಕಾದ್ದು ತುಂಬಾ ಮುಖ್ಯವಾದ ಸಂಗತಿ. ರಾಣಿನೊಣ ಬಂದಿದ್ದರೆ ಕೆಲಸಗಾರನೊಣಗಳು ಗೂಡನ್ನು ಬಿಟ್ಟು ಹೋಗಲಾರವು. ಗೂಡನ್ನು ಜೇನುನೊಣಗಳು ಬಿಟ್ಟು ಹೋದರೆ ರಾಣಿ ಬಂದಿಲ್ಲ ಎಂದು ತಿಳಿಯಬೇಕು. ರಾಣಿ ಬಂದಿದೆ ಎಂಬುದನ್ನು ಖಾತ್ರಿ ಮಾಡಿಕೊಂಡು ರಾಣಿ ಹೊರಗೆ ಹೋಗದಂತೆ ತಡೆಗೇಟನ್ನು ಹಾಕಬೇಕು.

ಜೇನು ಪೆಟ್ಟಿಗೆಗೆ ಒಳ ಮುಚ್ಚಳಗಳನ್ನು ಬಳಸುವುದರಿಂದ ಗೂಡಿನ ಉಷ್ಣತೆಯನ್ನು ಕಾಪಾಡುವುದು ಸಾಧ್ಯ. ಇದರ ಮಧ್ಯಭಾಗದಲ್ಲಿ ದ್ವಾರ ಇಡುವುದರಿಂದ ಇದನ್ನು ದೊಡ್ಡದು ಸಣ್ಣದು ಮಾಡುವ ಅನುಕೂಲ ಇರುತ್ತದೆ. ಇದರ ಮೂಲಕ ಜೇನು ನೊಣಗಳಿಗೆ ಆಹಾರವನ್ನು ಸಹ ಕೊಡಬಹುದು.



ಜೇನು ಸಂಗ್ರಹ

ಪೆಟ್ಟಿಗೆಯ ಸಂರಕ್ಷಣೆ

ಜೇನುಗೂಡಿನಲ್ಲಿ ಜೇನನ್ನು ಕೂರಿಸಿದ ಮೇಲೆ ವಹಿಸಬೇಕಾದ ಕೆಲವು ಎಚ್ಚರಗಳು ಇವೆ. ಜೇನು ಸಿಹಿಯಾಗಿರುವುದರಿಂದ ಅದನ್ನು ತಿನ್ನುವುದಕ್ಕಾಗಿ ಇರುವೆಗಳು, ಇಲಿಗಳು, ಹಾವುಗಳು ಬರುತ್ತವೆ. ಇವುಗಳು ಬಾರದಂತೆ ಜಾಗರೂಕತೆ ವಹಿಸಬೇಕು. ಇದಕ್ಕಾಗಿ ಎರಡು ಎರಡೂವರೆ ಅಡಿಗಳಷ್ಟು ಎತ್ತರಕ್ಕೆ ಕಂಬ ಹಾಕಿ ಅದರ ಮೇಲೆ ಪೆಟ್ಟಿಗೆಗಳನ್ನು ಇಡಬೇಕು.

ಇರುವೆ ಬಾರದಂತೆ ಕಂಬದ ಬುಡಕ್ಕೆ ಡಿ.ಡಿ.ಟಿ ಗಳಂತಹ ವಿಷದ ಹುಡಿಗಳನ್ನು ಹಾಕಬೇಕು ಅಥವಾ ಬುಡದಲ್ಲಿ ನೀರು ನಿಲ್ಲುವಂತಹ ವ್ಯವಸ್ಥೆಮಾಡಬೇಕು. ಕಂಬಗಳಿಗೆ ಬಟ್ಟೆಕಟ್ಟಿ ಟಾರನ್ನು ಹಚ್ಚಬೇಕು. ಆಗ ಇರುವೆಗಳಿಂದ ತೊಂದರೆಯಾಗಲಾರದು. ಇತರ ಜೀವಿಗಳಿಂದಲೂ ತೊಂದರೆಯಾಗದಂತೆ ಪೆಟ್ಟಿಗೆಗಳನ್ನು ಆಗಾಗ ಪರೀಕ್ಷೆ ಮಾಡುತ್ತಿರಬೇಕಾಗುತ್ತದೆ.

ಜೇನು ತೆಗೆಯುವುದು

ಕಾಡಿನಲ್ಲಿ ಜೇನು ಸಿಕ್ಕಿದಾಗ ಎರಿಗಳಿಂದ ಜೇನುನೊಣಗಳನ್ನು ಓಡಿಸಿ ಅಥವಾ ಸುಟ್ಟು ಜೇನನ್ನು ತೆಗೆಯುತ್ತಾರೆ. ಇದರಿಂದ ಆ ಜೇನುಕುಟುಂಬ ನಾಶವಾದಂತೆ ಆಗುತ್ತದೆ. ಆಧುನಿಕ ವಿಧಾನದಲ್ಲಿ ಈ ರೀತಿ ಮಾಡಬೇಕೆಂದಿಲ್ಲ. ಪೆಟ್ಟಿಗೆಗಳಲ್ಲಿ ಸಾಕುವ ಜೇನಿನ ಎರಿಗಳು ಹಾಳಾಗದಂತೆ, ತುಂಡಾಗದಂತೆ ಜೇನು ತೆಗೆಯುವ ಯಂತ್ರ ನಮ್ಮಲ್ಲಿದೆ. ಇದನ್ನು ಉಪಯೋಗಿಸುವುದರಿಂದ ಜೇನುನೊಣಗಳಿಗೆ ಮತ್ತೆ ಗೂಡು ಕಟ್ಟುವ ಶ್ರಮ ಕಡಿಮೆಯಾಗುತ್ತದೆ. ಜೇನು ತೆಗೆಯುವ ಯಂತ್ರದಲ್ಲಿ ಚೌಕಟ್ಟನ್ನು ಲಂಬವಾಗಿಟ್ಟು ತಿರುಗಿಸಬೇಕು. ಆಗ ಜೇನು ಎರಿಯಿಂದ ಹೊರಬರುತ್ತದೆ. ಎರಿ ನಷ್ಟವಾಗುವುದಿಲ್ಲ.

ಜೇನು ನೊಣಗಳನ್ನು ಸಾಯಿಸದೆ ಜೇನು ತೆಗೆಯಲು ಹೊಗೆ ತಿದಿಗಳನ್ನು ಬಳಸಬೇಕು. ಜೇನುಗೂಡಿಗೆ ಹೊಗೆ ಕೊಟ್ಟಾಗ ಸಂಗ್ರಹಿಸಿದ ಜೇನನ್ನು ತಿನ್ನುವುದಕ್ಕೆ ತೊಡಗುತ್ತದೆ. ಆಗ ನಮಗೆ ಚುಚ್ಚುವುದಿಲ್ಲ, ಸುಲಭವಾಗಿ ಜೇನು ತೆಗೆಯಬಹುದು. ಹೊಗೆ ತಿದಿಗೆ ಶುದ್ಧವಾದ ಗೋಣಿ ಚೀಲ, ಬಟ್ಟೆ, ತೆಂಗಿನ ನಾರನ್ನು ಬಳಸಬೇಕು.

ಜೇನಿನ ಬಗೆಗಳು

ಜೇನು ನೊಣಗಳು ಯಾವ ಹೂಗಳಿಂದ ರಸ ಸಂಗ್ರಹಿಸುತ್ತಿರುತ್ತದೋ, ಯಾವ ಹೂ ಹೆಚ್ಚಿದೆಯೋ ಅದರ ರಸ ಜೇನಿನಲ್ಲಿ ಹೆಚ್ಚಿರುತ್ತದೆ. ಆ ಪ್ರಕಾರ ಕೃಷಿಕ ಜೇನನ್ನು ಹೆಸರಿಸುತ್ತಾನೆ. ನಿಂಬೆ ಹೂಗಳಿಂದ ಸಂಗ್ರಹಿಸಿದ ಜೇನು ನಿಂಬೆಜೇನು. ಇದೇ ರೀತಿ ಬೇರೆ ಬೇರೆ ಹೂಗಳಿಂದ ಸಂಗ್ರಹಿಸಿದ ಜೇನುಗಳಿಗೆ ಅದರ ಹೆಸರನ್ನು ಇಡುತ್ತಾನೆ.

ಜೇನನ್ನು ಮುಖ್ಯವಾಗಿ ಮೂರು ರೀತಿಯಿಂದ ವಿಂಗಡಿಸಬಹುದು. ಹೂ ಜೇನು ಇದು ಒಂದೇ ಜಾತಿಯ ಗಿಡಗಳಿಂದ ಅಥವಾ ಹೂಗಳಿಂದ ಸಂಗ್ರಹವಾದ ಜೇನು. ನಿಂಬೆ, ಅಕಾಸಿಯಾ, ಗೂಲಾಬಿ, ಸೂರ್ಯಕಾಂತಿ ಈ ರೀತಿಯ ಹೂಗಳಿಂದ ಸಂಗ್ರಹಿಸುತ್ತದೆ.

ಪ್ರಾದೇಶಿಕ ಜೇನು ಒಂದೇ ಪ್ರದೇಶದಲ್ಲಿ ಸಂಗ್ರಹವಾದ ಜೇನಾಗಿರುತ್ತದೆ.

ಕೃತಕ ಜೇನು ಅಂದರೆ ಮನುಷ್ಯ ಜೇನುನೊಣಗಳಿಗೆ ಕೃತಕ ಆಹಾರ ಕೊಡುವ ಮೂಲಕ ತಯಾರಾದ ಜೇನು ಆಗಿರುತ್ತದೆ.

ಜೇನು ಸಂಗ್ರಹಿಸುವ ರಸಗಳಿಗೆ ಮತ್ತು ವಾಸಿಸುವ ಸ್ಥಳಗಳಿಗೆ ಅನುಗುಣವಾಗಿ ಹುಲ್ಲುಗಾವಲಿನ ಜೇನು, ಬಯಲು ಜೇನು, ಕಾಡು ಜೇನು, ಹಣ್ಣಿನ ತೋಟದ ಜೇನು, ಬೆಟ್ಟದ ಜೇನು.... ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ.

ಜೇನಿನ ಗುಣವನ್ನು ಬಣ್ಣ, ರುಚಿ ಹಾಗೂ ವಾಸನೆಗಳಿಗೆ ಸಂಬಂಧಿಸಿಯೂ ಗುರುತಿಸುತ್ತಾರೆ. ತಿಳಿ, ಸಾಧಾರಣ ಮತ್ತು ಗಾಢ ಬಣ್ಣದ ಜೇನುಗಳೆಂದು ಮೂರು ಬಗೆಯ ಜೇನನ್ನು ಕಾಣಬಹುದು. ಬಣ್ಣ ಮತ್ತು ವಾಸನೆಗಳಿಂದ ಯಾವುದರ ಜೇನು ಇದು ಎಂಬುದಾಗಿ ಹೇಳುವುದಕ್ಕೆ ಸಾಧ್ಯವಿದೆ.

ಜೇನಿನ ಮಹತ್ವ ಮತ್ತು ಪ್ರಯೋಜನಗಳು

ಪ್ರಾಚೀನ ಕಾಲದಲ್ಲಿ ಜೇನುನೊಣಗಳನ್ನು ದೇವತೆಗಳ ಸಹಚರರೆಂದು ಭಾವಿಸುತ್ತಿದ್ದರು. ಜೇನು ಪ್ರಕೃತಿಯ ಒಂದು ಭಾಗವಾಗಿದೆ. ಅದರಿಂದ ಲಾಭವಿದೆ ಎಂದು ತಿಳಿದ ಮನುಷ್ಯ ಅವುಗಳನ್ನು ಸಾಕುವುದಕ್ಕೆ ಆರಂಭಿಸಿದನು.

ಪೆಟ್ಟಿಗೆಗಳನ್ನು ಇಟ್ಟು ಜೇನು ಸಾಕುವುದರಿಂದ ಉದ್ಯೋಗವಿಲ್ಲದವರಿಗೆ ಉದ್ಯೋಗ ದೊರೆತಂತೆ ಆಗುವುದು. ಒಂದೂವರೆ ತಿಂಗಳಿಂದ ಎರಡು ತಿಂಗಳುಗಳಲ್ಲಿ ಒಂದೊಂದು ಜೇನು ಕುಟುಂಬದಿಂದ ಆರೇಳು ಕಿಲೋಗಳವರೆಗೆ ಜೇನು ಪಡೆಯುವುದು ಸಾಧ್ಯವಿದೆ.

ಜೇನನ್ನು ಮುಖ್ಯ ಆಹಾರವಾಗಿ ಯಾರೂ ಬಳಸುವುದಿಲ್ಲ. ಬೇರೆ ಆಹಾರದ ಜೊತೆಯಲ್ಲಿ ಸೇವಿಸುತ್ತಾರೆ. ದೋಸೆ, ಬ್ರೆಡ್‌ಗಳನ್ನು ತಿನ್ನುವಾಗ ಅಥವಾ ಶರಬತ್ತು ಮಾಡುವಾಗ ಜೇನನ್ನು ಬಳಸುತ್ತಾರೆ. ಜೇನನ್ನು ಸಕ್ಕರೆಯ ಬದಲಿಗೆ ಉಪಯೋಗಿಸಬಹುದು. ಜೇನು ಒಂದು ಪೌಷ್ಟಿಕ ಆಹಾರ. ಜೇನಿನಲ್ಲಿ ಸುಮಾರು ಎಂಬತ್ತು ಪೌಷ್ಟಿಕ ವಸ್ತುಗಳಿವೆ. ಹೆಚ್ಚಿನ ವಸ್ತುಗಳು ವಿವಿಧ ಬಗೆಯ ಸಕ್ಕರೆಗಳೇ ಆಗಿವೆ. ಸಕ್ಕರೆ ಆಯಾಸವನ್ನು ಬೇಗ ಕಡಿಮೆ ಮಾಡುವುದು. ವಿಪರೀತ ಆಯಾಸಗೊಳ್ಳುವ ಸಂದರ್ಭಗಳಲ್ಲಿ ಜೇನನ್ನು ಉಪಯೋಗಿಸಬಹುದು. ಆಟಗಾರರು, ಮಕ್ಕಳು, ಮುದುಕರು ಜೇನನ್ನು ಸೇವಿಸುವುದರಿಂದ ಕಳೆದುಕೊಂಡ ಶಕ್ತಿಯನ್ನು ತಕ್ಷಣಕ್ಕೆ ತುಂಬುವುದು ಸಾಧ್ಯವಿದೆ.

ಔಷಧಿಯಾಗಿ ಜೇನಿನ ಬಳಕೆ

ಹೂಗಳ ರಸಗಳಲ್ಲಿ ಔಷಧೀಯ ಗುಣ ಇರುತ್ತದೆ. ಸಂಗ್ರಹವಾದ ಜೇನಿನಲ್ಲಿಯೂ ಈ ಗುಣ ಉಳಿದೇ ಇರುವುದರಿಂದ ಜೇನನ್ನು ಔಷಧಿಗಳಾಗಿ ಬಳಸುತ್ತಾರೆ.

ಗಾಯಗಳು ಮಾಗುವುದಕ್ಕಾಗಿ, ಮೂತ್ರ ವಿಸರ್ಜನೆ ಸರಾಗವಾಗಲು, ಹೊಟ್ಟೆ ಹಗುರವಾಗುವಂತೆ ಮಾಡಲು, ಹಿಂದೆ ಈಜಿಪ್ಟಿನಲ್ಲಿ ಜೇನನ್ನು ಬಳಸುತ್ತಿದ್ದರಂತೆ. ಅದೇ ರೀತಿ

ಹಾಲು ಮತ್ತು ಜೇನನ್ನು ಸೇರಿಸಿ ಕುಡಿದಾಗ ಆಯಸ್ಸು ಹೆಚ್ಚುತ್ತದೆ ಎಂದು ತಿಳಿಯಲಾಗಿತ್ತು. ದೇಹಕಾಂತಿಯನ್ನು ಕಾಪಾಡಲು ಜೇನನ್ನು ಮತ್ತು ಎಣ್ಣೆಯನ್ನು ಲೇಪಿಸುತ್ತಾರೆ. ಇತರ ಆಹಾರಗಳ ಜೊತೆಗೆ ಜೇನನ್ನು ಸೇರಿಸಿದಾಗ ಶಕ್ತಿ ಮತ್ತು ಕಾಂತಿ ಹೆಚ್ಚಾಗುವುದು.

ಜೇನು ಜೀರ್ಣಶಕ್ತಿಗೆ ಸಹಕಾರಿ, ನೆನಪನ್ನು ಉತ್ತಮಗೊಳಿಸುವ ಗುಣವನ್ನು ಹೊಂದಿದೆ. ಯೌವನವನ್ನು ಕಾಯ್ದುಕೊಳ್ಳುತ್ತದೆ. ಬುದ್ಧಿಯನ್ನು ಚುರುಕುಗೊಳಿಸುತ್ತದೆ.

ಇತರ ಔಷಧಿಗಳ ತಯಾರಿಕೆಯಲ್ಲಿ ಜೇನನ್ನು ಬಳಸುತ್ತಾರೆ. ಜೇನುಗಳನ್ನು ಉಪಯೋಗಿಸಿ ಕೇಕ್ ಮತ್ತು ಇತರ ಸಿಹಿ ತಿಂಡಿಗಳನ್ನೂ ತಯಾರಿಸಬಹುದು. ಚಾಕ್‌ಲೇಟ್, ಬಿಸ್ಕತ್ತುಗಳನ್ನೂ ಇದರಿಂದ ತಯಾರಿಸುತ್ತಾರೆ.

ಜೇನುನೊಣದ ಚುಚ್ಚುವಿಕೆಯ ಪರಿಣಾಮ

ಜೇನುನೊಣದ ದೇಹದಲ್ಲಿರುವ ವಿಷದಲ್ಲಿ ಚಿಕಿತ್ಸಕ ಗುಣವೂ ಇದೆ. ಇದು ಕಹಿಯಾಗಿದ್ದು ಚುರುಕು ರುಚಿವುಳ್ಳದ್ದು ಆಗಿದೆ. ಆಮ್ಲದಂತೆ ವರ್ತಿಸುವ ಗುಣ ಇದಕ್ಕಿದೆ. ಮನುಷ್ಯನಿಗೆ ಜೇನುನೊಣ ಚುಚ್ಚಿದಾಗ ಆವಿಯಾಗುವ ಎಣ್ಣೆ ಉರಿಯನ್ನುಂಟುಮಾಡುವುದಕ್ಕೆ ಕಾರಣ ಎಂದು ಸಂಶೋಧಕರ ಅಭಿಪ್ರಾಯ.

ಜೇನಿನ ವಿಷ ಬೇಗ ಒಣಗುವುದು. ಈ ವಿಷಕ್ಕೆ ಶಾಖನಿರೋಧಕ ಗುಣ ಇದೆ. ಇದು ಹಲವಾರು ವರ್ಷಗಳ ಕಾಲ ತನ್ನ ಗುಣವನ್ನು ಉಳಿಸಿಕೊಳ್ಳುವುದು. ಕೆಲವು ರೋಗಗಳನ್ನು ತಡೆಯಲು ಲಸಿಕೆಗಳನ್ನು ಹಾಕುತ್ತಾರಲ್ಲವೇ? ಲಸಿಕೆಗಳೆಂದರೆ ರೋಗಕಾರಕ ವಿಷಾಣುಗಳನ್ನೇ ರೋಗನಿರೋಧಕಗಳನ್ನಾಗಿ ಬಳಸುವ ತಂತ್ರ. ಜೇನಿನ ವಿಷ ಸಹ ಹೀಗೆಯೇ ಕೆಲಸ ಮಾಡುತ್ತದೆ.

ಮನುಷ್ಯನಿಗೆ ಜೇನುನೊಣ ಚುಚ್ಚಿದಾಗ ಒಂದು ತೊಟ್ಟು ವಿಷ ಆತನ ದೇಹಕ್ಕೆ ಪ್ರವೇಶಿಸುತ್ತದೆ. ಆ ಜಾಗ ಕೆಂಪಾಗಿ ಊದಿಕೊಳ್ಳುವುದು. ಉರಿ, ನೋವು ಕಾಣಿಸಿಕೊಳ್ಳುವುದು. ಹೆಚ್ಚು ವಿಷ ಮೈಗೆ ಪ್ರವೇಶಿಸಿದರೆ ಅಪಾಯವೂ ಬರಬಹುದು. ಆದರೆ, ಆಗಾಗ ಜೇನು


ಚುಚ್ಚಿದವರಲ್ಲಿ ಜೇನುವಿಷವನ್ನು ಪ್ರತಿರೋಧಿಸುವ ಶಕ್ತಿ ರೂಪುಗೊಳ್ಳುತ್ತದೆ. ಈ ಮಾತಿಗೆ ಸಾಕ್ಷಿ ಎಂಬಂತೆ ರಷ್ಯಾದಲ್ಲಿನ ಘಟನೆಯೊಂದನ್ನು ಗಮನಿಸಬಹುದು.

ಒಬ್ಬ ಜೇನು ಕೃಷಿಕನ ಮನೆಯಲ್ಲಿ ನಡೆದ ಒಂದು ಘಟನೆ. ಕೃಷಿಕನ ಒಂದು ವರ್ಷದ ಮಗುವಿಗೆ ತುಂಬಾ ಜೇನುನೊಣಗಳು ಚುಚ್ಚಿದವು. ಮಗುವಿನ ದೇಹ ಮುಖ ಊದಿಕೊಂಡಿತು. ಕೆಲವು ಗಂಟೆಗಳಲ್ಲಿ ಮಗು ಸಾಯಬಹುದು ಎಂದು ಜನ ತಿಳಿದುಕೊಂಡರು. ಆದರೆ, ಮಗುವಿನ ಊತ ಮೂರು ದಿನಗಳಲ್ಲಿ ಕಡಿಮೆ ಆಯಿತು. ಆರನೆಯ ದಿನದಲ್ಲಿ ಮಗು ಮೊದಲಿನಂತೆ ಆಯಿತು. ಪರೀಕ್ಷೆಗಳಿಂದ ತಿಳಿದ ಅಂಶ ಇಷ್ಟು. ಗರ್ಭಿಣಿಯಾಗಿದ್ದಾಗ ಮಗುವಿನ ತಾಯಿಗೆ ಜೇನುನೊಣಗಳು ಚುಚ್ಚಿದ್ದವು. ಹೀಗಾಗಿ ಮಗುವಿನ ದೇಹದಲ್ಲಿ ಪ್ರತಿರೋಧ ಶಕ್ತಿ ಇತ್ತು. ಈ ಕಾರಣದಿಂದ ಮಗು ಬದುಕಿತು. ಆನಂತರದಲ್ಲಿ ಆ ಮಗು ಯಾವ ರೋಗಗಳಿಗೂ ತುತ್ತಾಗಲಿಲ್ಲ ಎನ್ನುವುದು ತಿಳಿದು ಬಂದ ಸತ್ಯ.


ಈ ರೀತಿಯ ಘಟನೆಗಳು ತುಂಬಾ ದೊರೆಯುತ್ತವೆ. ಇದರಿಂದ ಜೇನುವಿಷ ಆರೋಗ್ಯವರ್ಧಕವೂ ಹೌದು ಎಂದು ತಿಳಿಯಬಹುದು.

ವಿದೇಶಗಳಲ್ಲಿ ಜೇನು ಸಾಕುವಿಕೆ

ನಮ್ಮ ದೇಶಕ್ಕಿಂತ ಬೇರೆ ಕೆಲವು ದೇಶಗಳು ಜೇನು ಸಾಕುವುದರಲ್ಲಿ ಹೆಚ್ಚು ಮುಂದುವರಿದಿವೆ. ನೂರಾರು ವರ್ಷಗಳಷ್ಟು ಹಿಂದೆಯೇ ರಷ್ಯಾ ದೇಶದಲ್ಲಿ ಮಡಿಸಬಹುದಾದ ಜೇನುಚೌಕಟ್ಟನ್ನು ರಚಿಸಿ ಜೇನು ಎರಿ ರಚಿಸಿದ್ದರು. ಜೇನು ಸಾಕುವುದರಿಂದ ಲಾಭ ಇದೆ ಎಂಬುದನ್ನು ಅವರು ಆಗಲೇ ತಿಳಿದಿದ್ದರು. ಜೇನುನೊಣಗಳನ್ನು ಕೊಂದು ಜೇನು ಸಂಗ್ರಹ ಮಾಡುವುದಕ್ಕೆ ತಡೆಹಾಕಿದ್ದರು. ಹೊಸ ವಿಧಾನಗಳಿಂದ ಜೇನು ಸಂಗ್ರಹಿಸುವುದನ್ನು ಸೂಚಿಸಿದ್ದರು. ಹೊಗೆಯನ್ನು ಬಳಸುವುದರಿಂದ ಜೇನುನೊಣಗಳು ದೂರಹೋಗುವುವು. ಆಗ ಸುಲಭವಾಗಿ ಜೇನು ಸಂಗ್ರಹಿಸುವುದು ಸಾಧ್ಯ ಎಂಬುವುದನ್ನು ಸಹ ಅವರು ತಿಳಿದಿದ್ದರು.



ಜೇನು ಸಾಕಣೆ ಹಳ್ಳಿಗಳಲ್ಲಿ



ಜೇನು ಸಾಕಣೆ ಪೆಟ್ಟಿಗೆ

ಜೇನುಕೃಷಿಗೆ ರಷ್ಯಾ ದೇಶದ ಕೊಡುಗೆ ಅಪಾರವಾದದ್ದು. ಆಧುನಿಕ ರೀತಿಯಲ್ಲಿ ಜೇನುಕೃಷಿ ಮಾಡುವುದು ಬಹಳ ಹಿಂದಿನಿಂದಲೂ ನಡೆದು ಬಂದಿದೆ. ಅವರು ಸಂಶೋಧನೆಗಳ ಮೂಲಕ ಜೇನುನೊಣಗಳು ಬದುಕುವ ಬಗೆಗೆ ತಿಳಿದುಕೊಂಡಿದ್ದಾರೆ. ಜೇನು ಸಾಕುವುದು ಒಂದು ಉದ್ಯೋಗ. ಅದರಿಂದ ಲಾಭ ಪಡೆಯಲು ಸಾಧ್ಯ ಎಂಬುದನ್ನು ತಿಳಿದಿದ್ದರು. ಜೇನು ಔಷಧಿಯಾಗಿ ಹೇಗೆ ಉಪಯೋಗಿಸಬಹುದು ಸಾಧ್ಯ ಎಂಬುದನ್ನು ಪ್ರಯೋಗಗಳಿಂದ ಇವರು ತಿಳಿದಿದ್ದರು.


ವಿದೇಶದ ಜೇನುನೊಣಗಳು ನಮ್ಮ ದೇಶದ ಜೇನುನೊಣಗಳಿಗಿಂತ ಬೇರೆ ರೀತಿಯ ಸ್ವಭಾವವನ್ನು ಹೊಂದಿರುತ್ತದೆ. ವಿದೇಶದ ಜೇನುನೊಣಗಳನ್ನು ಇಟಾಲಿಯನ್, ಬಾನಟ್, ಜರ್ಮನ್, ಬ್ಲೇಕ್, ಈಜಿಪ್ಶಿಯನ್ ಇವೇ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಆಧುನಿಕ ಉಪಕರಣಗಳನ್ನು ಕಂಡು ಹಿಡಿಯುವ ಮೂಲಕ ಜೇನುಕೃಷಿಯನ್ನು ಆಧುನಿಕಗೊಳಿಸಿದರು. ಬೇರೆ ಬೇರೆ ರೀತಿಯಲ್ಲಿ ಹೇಗೆ ಸಾಕುವುದು ಸಾಧ್ಯ ಎಂಬ ಬಗೆಗೆ ಪ್ರಯೋಗ ನಡೆಸಿದರು. ಈ ಎಲ್ಲ ಕಾರಣಗಳಿಂದ ಜೇನುಕೃಷಿಯನ್ನು ಅಭಿವೃದ್ಧಿ ಪಡಿಸುವುದು ಅವರಿಂದ ಸಾಧ್ಯವಾಯಿತು.

ಜೇನು ರೈತನ ಮಿತ್ರ ಎಂಬುದನ್ನು ಪ್ರಯೋಗಗಳಿಂದ ತಿಳಿದ ವಿದೇಶಿಯರು ಹೆಚ್ಚು ಜೇನು ಸಾಕುವುದಕ್ಕೆ ಪ್ರಾರಂಭಿಸಿದರು. ಪರಾಗ ಸ್ಪರ್ಶವನ್ನು ಜೇನುನೊಣಗಳು ಮಾಡುವುದರಿಂದ ಕೃಷಿಯಲ್ಲಿ ಪ್ರಗತಿ ಸಾಧಿಸುವುದು ಸಾಧ್ಯ ಎಂದು ತಿಳಿದುಕೊಂಡು ಜೇನು ಕೃಷಿಗೆ ಪ್ರೋತ್ಸಾಹಿಸಿದರು.

ನಮ್ಮ ದೇಶದಲ್ಲಿ ಜೇನು ಸಾಕುವಿಕೆ

ನಮ್ಮ ದೇಶದಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಜೇನುಕೃಷಿಗೆ ಮಹತ್ವ ನೀಡಲಾಗುತ್ತಿದೆ. ಆದರೂ ಸಾಕಷ್ಟು ಪ್ರಯೋಗಗಳು ನಡೆದಿಲ್ಲ. ಜೇನಿನ ಉಪಯೋಗಗಳ ಬಗೆಗೆ



ಜೇನು ಸಾಕಣೆ ವಿಧಾನ

ಅಧ್ಯಯನಗಳು ಸಾಕಷ್ಟು ನಡೆಯದೇ ಇರುವುದರಿಂದ ಜೇನುಕೃಷಿ ಅಷ್ಟಾಗಿ ಪ್ರಗತಿ ಹೊಂದಲಿಲ್ಲ. ಜೇನುಕೃಷಿಯಿಂದ ಆರ್ಥಿಕ ಲಾಭಗಳಿವೆ, ಸ್ವಂತ ಉದ್ಯೋಗ ಆಗುವುದು ಎಂಬುದು ಇತ್ತೀಚೆಗೆ ಪ್ರಚಾರಕ್ಕೆ ಬರುತ್ತಿದೆ. ಈ ಕಾರಣಗಳನ್ನು ತಿಳಿದುಕೊಂಡು ಸಹಕಾರಿ ಸಂಘಗಳು ಸ್ಥಾಪನೆಗೊಂಡವು.

ವಿದೇಶಿಯರ ಪ್ರಯೋಗಗಳನ್ನು ಮಾದರಿಯಾಗಿಟ್ಟುಕೊಂಡು ಭಾರತದಲ್ಲಿಯೂ ಜೇನುಕೃಷಿ ಆರಂಭವಾಗಿದೆ. ನಮ್ಮ ದೇಶದಲ್ಲಿಯೇ ಪ್ರಯೋಗಗಳು ಹೆಚ್ಚು ಹೆಚ್ಚು ಆಗಿ ಜೇನುಕೃಷಿಯ ಮಹತ್ವವನ್ನು ಸರಕಾರ ಪ್ರಚುರ ಪಡಿಸಿದಾಗ ಜೇನುಕೃಷಿ ಪ್ರಗತಿ ಹೊಂದುವುದು ಸಾಧ್ಯ.

ಜೇನುಕೃಷಿಯಲ್ಲಿ ಬಹುಮುಖ್ಯವಾದ ಸಂಗತಿ ಒಂದಿದೆ. ಅದೆಂದರೆ, ಜೇನುಕೃಷಿಕ ಜೇನುಹುಳುಗಳಿಂದ ಜೇನನ್ನು ಸಂಗ್ರಹಿಸುತ್ತಾನೆ. ಆದರೆ ಇದರಿಂದ ಜೇನು ಹುಳುಗಳಿಗೆ ನಷ್ಟವೇನಿಲ್ಲ. ಏಕೆಂದರೆ, ಈಗಾಗಲೇ ನಿಮಗೆ ತಿಳಿದಿರುವಂತೆ ಜೇನುತುಪ್ಪಾ ಎಂಬುವುದು ಜೇನು ಹುಳುಗಳು ತಮಗೆ ಹೆಚ್ಚಾಗಿ ಉಳಿದ ಹೂವಿನ ರಸವನ್ನು ಸಂಗ್ರಹಿಸುವ ವಿಧಾನ. ಜೇನುಕೃಷಿಕ ಜೇನುಹುಳುಗಳಿಗೆ ಹೆಚ್ಚಿನ ಹೂವಿನರಸ ಒದಗುವಂತೆ ಅನುಕೂಲ ಮಾಡಿಕೊಡುತ್ತಾನೆ. ಅವು ತಮಗೆ ಬೇಕಾದಷ್ಟು ರಸವನ್ನು ಕುಡಿದು ಮಿಕ್ಕದ್ದನ್ನು ಜೇನುತುಪ್ಪ ಮಾಡುತ್ತವೆ. ತಮಗೆ ಆಹಾರದ ಕೊರತೆ ಬಿದ್ದಾಗ ಮಾತ್ರ ಬಳಸುತ್ತವೆ.

ಹೀಗಾಗಿ ಜೇನುನೊಣಗಳಿಗೆ ಹೂವಿನ ರಸದ ಕೊರತೆ ಎಂದಿನವರೆಗೆ ಇಲ್ಲವೋ ಅಂದಿನವರೆಗೆ ಅವುಗಳಿಗೆ ಜೇನುತುಪ್ಪದ ಅವಶ್ಯಕತೆ ಬೀಳುವುದಿಲ್ಲ. ಈ ಜೇನುತುಪ್ಪವನ್ನು ಜೇನುಕೃಷಿಕ ಸಂಗ್ರಹಿಸಿದರೆ ಜೇನು ನೊಣಗಳಿಗೆ ಯಾವ ತೊಂದರೆಯೂ ಇಲ್ಲ. ಪರಿಸರವನ್ನು ದುರಾಸೆಯಿಂದ ಬಳಸಿದ ಪಾಪ ಮಾನವನಿಗೆ ಇಲ್ಲ. ಸಾಕಿದ ಜೇನುನೊಣಗಳು ಪರಾಗಗಳ ಹರಡುವಿಕೆಗೆ ನೆರವಾಗುವುದರಿಂದ ಪ್ರಕೃತಿಯ ಕೆಲಸಕ್ಕೂ ಕೃಷಿಕ ಅನುಕೂಲ ಒದಗಿಸುತ್ತಾನೆ.

ಹೀಗೆ ಜೇನುಕೃಷಿ ಎಂಬುದು ಆದಾಯ ಕೊಡುವ ವಿಧಿಯೂ ಹೌದು, ಪರಿಸರವನ್ನು ಪ್ರೀತಿಯಿಂದ ಕಾಪಾಡುವ ಪರಿಯೂ ಹೌದು.

✣ ✣ ✣ ✣

ಕನ್ನಡ ವಿಶ್ವವಿದ್ಯಾ … ಮಟ್ಟದವರೆಗೆ ಉತ್ತಮ
ಹಾಗೂ ಉಪಯ … 'ಪಠ್ಯಪುಸ್ತಕ ರಚನಾ
ವಿಭಾಗ'ವನ್ನು ತ … ಪಠ್ಯಪುಸ್ತಕ ರಚನೆ
ಮಾಡಬೇಕೆಂದು … ನವಸಾಕ್ಷರರಿಗಾಗಿ
ಪುಸ್ತಕ ಬರೆಸುವ … ವಹಿಸಿಕೊಟ್ಟರು.
ವಿಶ್ವವಿದ್ಯಾಲಯವ … ಖ್ಯಾತ ಲೇಖಕರನ್ನು,
ಭಾಷಾತಜ್ಞರನ್ನು, … ಲ್ಲರ ಅಭಿಪ್ರಾಯ,
ಸಲಹೆ, ಸಹಕಾರಗ … ಮುದ್ರಣ ವಿನ್ಯಾಸ,
ಚಿತ್ರಗಳ ಮಹತ್ವ … ೕಕ ಸಲ ಚರ್ಚಿಸಿ
ಯೋಜನೆಯನ್ನು …

ನವಸಾಕ್ಷರರಿಗಾಗಿ … ಪ್ರಕಟವಾಗಿರುವ
ಪುಸ್ತಕಗಳನ್ನೆಲ್ಲ … ಭಾಷಾತಜ್ಞರಿಂದ
ಪರಿಶೀಲಿಸಲಾಯಿತ … ಕೊಂಡು ಅವರಿಗೆ
ಕಮ್ಮಟಗಳನ್ನು ನ … ಆಯ್ದ ಜಿಲ್ಲೆ,
ತಾಲೂಕುಗಳಿಗೆ ಕ … ವವರಿಂದ ಅದರ
ಗುಣದೋಷಗಳ ಬ … ಶ್ವವಿದ್ಯಾಲಯದ
ಗಣಕಯಂತ್ರದಲ್ಲಿ … ಯಕರು ನೀಡಿದ್ದ
ಮಾಹಿತಿಗಳನ್ನೆಲ್ಲ … ವಾಗಿ ವಿಷಯದ
ಆದ್ಯತೆಗಳನ್ನು ನಿಧ … ಲೇಖಕರು ನಮ್ಮ
ವಿಶ್ವವಿದ್ಯಾಲಯದ … ರೂಪ ಕೊಟ್ಟರು.
ಕಲಾವಿದರು ವಿಷಯ … ಹಸ್ತಪ್ರತಿಗಳನ್ನು
ನವಸಾಕ್ಷರರ ಬಳಿ … ಅವರ ಮುಂದೆ ಓದಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು
ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು